# ಸಂವಿಧಾನ್

**ಅಮೃತ ಮಹೋತ್ಸವ ಸಂಭ್ರಮ, ಸಂವಿಧಾನ ಎದೆಗಿಳಿಸಿಕೊಳ್ಳುವ ಸಂದರ್ಭ**




‘ಭಾರತದ ಸಂವಿಧಾನ’ ಭಾರತೀಯರನ್ನು ಒಂದು ರಾಷ್ಟ್ರದ ವ್ಯವಸ್ಥೆಯಡಿ ಮುನ್ನಡೆಸುವ ಕಾನೂನುದೀವಿಗೆ ಮಾತ್ರವಲ್ಲ, ಅದು ಮಾನವೀಯ ಮೌಲ್ಯಗಳ ಸಂಕಥನವೂ ಆಗಿದೆ. ವ್ಯಕ್ತಿಯೊಬ್ಬ ತನ್ನ ಅನನ್ಯತೆಯನ್ನು ಉಳಿಸಿಕೊಂಡೂ, ಎಲ್ಲರೊಳಗೊಂದಾಗಿ ಬದುಕುವ ಅಪೂರ್ವ ಅವಕಾಶವನ್ನು ಸಂವಿಧಾನ ಕಲ್ಪಿಸಿದೆ. ಸಮಾಜದ ಕಟ್ಟಕಡೆಯ ಮನುಷ್ಯನ ಅಭಿವ್ಯಕ್ತಿಗೂ ಅವಕಾಶ ಕಲ್ಪಿಸುವ ಸಂವಿಧಾನ – ಸಮತೆ, ಮಮತೆ, ಮಾನವೀಯತೆಗಳ ನೆಲೆಗಟ್ಟಿನಲ್ಲಿ ರೂಪುಗೊಂಡಿರುವ ಜೀವಂತ ಕಲಾಕೃತಿಯಾಗಿದೆ. ಭಾರತೀಯರ ಪಾಲಿಗೆ ಏಕಕಾಲಕ್ಕೆ ಕಾವ್ಯವೂ, ಧರ್ಮವೂ, ಜೀವನವಿಧಾನವೂ, ಕರ್ತವ್ಯಪಥವೂ, ಗುರಿಯೂ ಆಗಿ ಒದಗುವ ಸಂವಿಧಾನಕ್ಕೀಗ ಎಪ್ಪತ್ತೈದು ವರ್ಷಗಳು! ಈ ಸಂಭ್ರಮ, ಸಂವಿಧಾನವನ್ನು ನಾವು ಇನ್ನಷ್ಟು ಎದೆಗಿಳಿಸಿಕೊಳ್ಳುವ ಸಂದರ್ಭವಾಗಿ ಒದಗಿದರೆ, ‘ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ’ ಎನ್ನುವ ಆಶಯ ನಿಜವಾಗಿ, ದೇಶ ಹಾಗೂ ದೇಶವಾಸಿಗಳ ಉನ್ನತಿಯೂ ಸಾಧ್ಯವಾಗುವುದು. ‘ಅಮೃತ ಮಹೋತ್ಸವ’ ಸಂದರ್ಭದಲ್ಲಿ ಸಂವಿಧಾನದ ಅನನ್ಯತೆ ಹಾಗೂ ಜೀವಪರತೆಯನ್ನು ‘ಸುಧಾ’ ಹೆಮ್ಮೆಯಿಂದ ಸ್ಮರಿಸುತ್ತಿದೆ.

■ ರಘುನಾಥ ಚ.ಹ.